# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ/712/2017/ಎ.ಆರ್.ಇ–10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 10/01/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ,**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀ ಮಧು,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಲಕ್ಕೇನಹಳ್ಳಿ ಗ್ರಾಮ ಪಂಚಾಯತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:** 1. ಕಂಪ್ಲೆಂಟ್/ಉಪಲೋಕ್/ಬಿಡಿ–4397/2015/ARLO-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 27/02/2017.

2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/278/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 22/04/2017.

3. ನಾಮನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ/712/2017, ಬೆಂಗಳೂರು ದಿನಾಂಕ: 27/05/2017.

* * * *

ಈ ದೂರನ್ನು, **ದೂರುದಾರರಾದ ಶ್ರೀ ತಿರುಮಲಯ್ಯ** ಬಿನ್ ತಿಮ್ಮರಾಯಪ್ಪ, ನಂ. 12, 1ನೇ 'ಎ' ಕ್ರಾಸ್, ಮಾರುತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು ನಗರ ರವರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ಲಕ್ಕೇನಹಳ್ಳಿ ಗ್ರಾಮ **ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀ ಮಧು** (ಇನ್ನು ಮುಂದೆ **ಆಪಾದಿತ ಸರ್ಕಾರಿ ನೌಕರ** ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ದೂರು ಸಲ್ಲಿಸಿ

ಲಕ್ಕೇನಹಳ್ಳಿ ಗ್ರಮದ ಸೈಟ್ ನಂ. 9 ಸರ್ವೆ ಸ್ಕೆಚ್ ಕೋರಿ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸಿದ್ದು, ಎದುರುದಾರರು ಸರ್ವೆ ಸ್ಕೆಚ್ ತಯಾರಿಸಲು ಹಣದ ಬೇಡಿಕೆ ಇಟ್ಟು ಕೆಲಸ ಮಾಡಿಕೊಟ್ಟಿಲ್ಲ. ಈ ಸಂಬಂಧವಾಗಿ ದೂರುದಾರರು ಜಿಲ್ಲಾಧಿಕಾರಿಗಳು, ತಹಶೀಲ್ದಾರ್ ಮತ್ತು ಎ.ಡಿ.ಎಲ್.ಆರ್ ರವರ ಬಳಿ ದೂರು ನೀಡಿದರೂ ಸಹ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲವೆಂದು ದೂರು ಸಲ್ಲಿಸಿರುತ್ತಾರೆ.

2. ಸದರಿ ದೂರನ್ನು ತನಿಖೆಗೆ ಕೈಗೆತ್ತಿಕೊಂಡು, ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 22/04/2017 ರಂದು, ಮಾನ್ಯ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 27/05/2017 ರಂದು ಅಪರ ನಿಬಂಧಕರು, ವಿಚಾರಣೆಗಳು-10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 27/06/2017 ರಂದು **ಈ ಕೆಳಕಂಡಂತೆ** ಕಳುಹಿಸಲಾಗಿರುತ್ತದೆ.

**ಅನುಬಂಧ–1**

**ದೋಷಾರೋಪಣೆ–1**

2. ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಮಧು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಲಕ್ಕೇನಹಳ್ಳಿ ಗ್ರಾಮ ಪಂಚಾಯತ್, ತುಮಕೂರು ಜಿಲ್ಲೆ ಆದ ನೀವು ಈ ಕೆಳಕಂಡಂತೆ ಕರ್ತವ್ಯಲೋಪವೆಸಗಿರುತ್ತೀರಿ ;

ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ಲಕ್ಕೇನಹಳ್ಳಿ ನಿವೇಶನ ಸಂಖ್ಯೆ: 9ರ ಸ್ವತ್ತು ಮೂಲತ: ದೂರುದಾರರ ತಂದೆಗೆ ಸಂಬಂಧಪಟ್ಟ ಆಸ್ತಿಯಾಗಿದ್ದು, ಸದರಿ ಸ್ವತ್ತನ್ನು ದೂರುದಾರರ ತಂದೆ ಕ್ರಯಕ್ಕೆ ಪಡೆದಿದ್ದಾರೆ. ಈ ಬಗ್ಗೆ ನಿಮ್ಮ ಕಛೇರಿಯಲ್ಲಿ ತೆರಿಗೆ ನಿರ್ಧರಣಾ ಪಟ್ಟಿಯನ್ನು ಸಹ ವಿತರಣೆ ಮಾಡಲಾಗಿದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 1978–79ನೇ ಸಾಲಿನಿಂದಲೂ ಸಹ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ದೂರುದಾರರ ಹೆಸರು ನಮೂದಾಗಿದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ಚಕ್ಕುಬಂದಿಯನ್ನು ಸಹಾ ನಮೂದಿಸಲಾಗಿದೆ. ಸದರಿ ಸ್ವತ್ತು ನಿಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತಿದ್ದು, ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ನಿಮ್ಮ ಕಛೇರಿಯಲ್ಲಿ ಲಭ್ಯವಿದ್ದು, ಸದರಿ ಸ್ವತ್ತು ಗ್ರಾಮ ಠಾಣಾ ವ್ಯಾಪ್ತಿಗೆ ಸಂಬಂಧಪಟ್ಟಿರುವುದರಿಂದ, ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೀಡುವುದು ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ಕಾರ್ಯವ್ಯಾಪ್ತಿಗೆ ಒಳಪಟ್ಟಿದೆ. ಆದರೆ, ನೀವು ಸ್ಥಳಕ್ಕೆ ಭೇಟಿ ನೀಡಿದ ಸಂಧರ್ಭದಲ್ಲಿ ಸ್ವತ್ತಿನ ಬಾಜುದಾರರು ತಂಟೆ ತಕರಾರು ಮಾಡಿರುವುದಾಗಿ ಹೇಳಿದ್ದೀರಿ. ಆದರೆ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಸರ್ವೆ ಸ್ಕೆಚ್ ನೀಡುವ ಅಧಿಕಾರ ನಿಮಗೆ ಇದ್ದರೂ ಸಹ ಅನಾವಶ್ಯಕವಾಗಿ ದೂರುದಾರರಿಗೆ ತೊಂದರೆ ನೀಡಿರುತ್ತೀರಿ.

ಆದಕಾರಣ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ಬೆಂಗಳೂರು ನಗರ ಕಾಮಾಕ್ಷಿ ಪಾಳ್ಯ ಮಾರುತಿ ನಗರ 1ನೇ ಎ ಕ್ರಾಸ್‌ನ ನಂ. 12ರ ನಿವಾಸಿಯಾದ ಶ್ರೀ. ತಿರುಮಲಯ್ಯ ಬಿನ್ ತಿಮ್ಮರಾಯಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮತ್ತು ತಾಲ್ಲೂಕ್ ಲಕ್ಕೇನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ. ಮಧುರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

4. ದೂರಿನ ಸಂಕ್ಷಿಪ್ತ ವಿವರಣೆ :- ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ಲಕ್ಕೇನಹಳ್ಳಿ ಗ್ರಾಮದ ಸೈಟ್ ನಂ. 9ರ ಸರ್ವೆ ಸ್ಕೆಚ್ ಕೋರಿ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸಿದ್ದು, ಆಪಾದಿತ ಸರ್ಕಾರಿ ನೌಕರರು ಸರ್ವೆ ಸ್ಕೆಚ್ ತಯಾರಿಸಲು ಹಣದ ಬೇಡಿಕೆ ಇಟ್ಟು ಕೆಲಸ ಮಾಡಿಕೊಟ್ಟಿಲ್ಲ. ಈ ಸಂಬಂಧವಾಗಿ ದೂರುದಾರರು ಜಿಲ್ಲಾಧಿಕಾರಿಗಳು, ತಹಶೀಲ್ದಾರ್ ಮತ್ತು ಎಡಿಎಲ್‌ಆರ್ ರವರ ಬಳಿ ದೂರು ನೀಡಿದರು ಸಹ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

5. ದೂರಿಗೆ ಆಪಾದಿತ ಸರ್ಕಾರಿ ನೌಕರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ, ಸರ್ವೆ ಸ್ಕೆಚ್‌ಗಾಗಿ ಅರ್ಜಿ ಸಲ್ಲಿಸಿದ್ದು, ಅದರ ಜೊತೆ 1963ನೇ ಇಸವಿಯ ಕ್ರಯ ಪತ್ರ ನಮೂನೆ 15ನ್ನು ಹಾಜರುಪಡಿಸಿದ್ದಾರೆ. ಆದರೆ, ದೂರುದಾರರು ಸಲ್ಲಿಸಿರುವ ಸ್ವತ್ತಿಗೂ ಕ್ರಯ ಪತ್ರಕ್ಕೂ ತಾಳೆಯಿಲ್ಲ. ದೂರುದಾರರು ಕೇಳಿರುವ ಸರ್ವೆ ಸ್ಕೆಚ್ ಮಾಡುವುದು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವುದಿಲ್ಲ. ಈ ಬಗ್ಗೆ ತಹಶೀಲ್ದಾರ್, ತುಮಕೂರು ರವರಿಗೆ ಅರ್ಜಿ ಬರೆಯಲಾಗಿದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಪರ್ಯಾವೀಕ್ಷಕರು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಾಜುದಾರರು ತಕರಾರು ಮಾಡಿದ್ದಾರೆ. 1988–89ನೇ ಸಾಲಿನ ಕರ ನಿರ್ಧರಣಾ ಪಟ್ಟಿ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿಯನ್ನು ಪರಿಶೀಲಿಸಲಾಗಿ ಒಂದಕ್ಕೊಂದು ತಾಳೆಯಿಲ್ಲ. ಈ ಬಗ್ಗೆ ದೂರುದಾರರಿಗೆ ಹಿಂಬರಹ ನೀಡಲಾಗಿದೆಯೆಂದು ಹೇಳಿದ್ದಾರೆ.

6. ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ: –

ನಿವೇಶನ ಸಂಖ್ಯೆ: 9ರ ಸ್ವತ್ತು ಮೂಲತ: ದೂರುದಾರರ ತಂದೆಗೆ ಸಂಬಂಧಪಟ್ಟ ಆಸ್ತಿಯಾಗಿದೆ. ಸದರಿ ಸ್ವತ್ತನ್ನು ದೂರುದಾರರ ತಂದೆ ಕ್ರಯಕ್ಕೆ ಪಡೆದಿದ್ದಾರೆ. ಈ ಬಗ್ಗೆ ಆಪಾದಿತ ಸರ್ಕಾರಿ ನೌಕರರ ಕಛೇರಿಯಲ್ಲಿ ತೆರಿಗೆ ನಿರ್ಧರಣಾ ಪಟ್ಟಿಯನ್ನು ಸಹ ವಿತರಣೆ ಮಾಡಲಾಗಿದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ 1978–79ನೇ ಸಾಲಿನಿಂದಲೂ ಸಹ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ದೂರುದಾರರ ಹೆಸರು ನಮೂದಾಗಿದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ಚಕ್ಕುಬಂದಿಯನ್ನು ಸಹಾ ನಮೂದಿಸಲಾಗಿದೆ. ಸದರಿ ಸ್ವತ್ತು ಆಪಾದಿತ ಸರ್ಕಾರಿ ನೌಕರರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತಿದ್ದು, ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಆಪಾದಿತ ಸರ್ಕಾರಿ ನೌಕರರ ಕಛೇರಿಯಲ್ಲಿ ಲಭ್ಯವಿದೆ. ಸದರಿ ಸ್ವತ್ತು ಗ್ರಾಮ ಠಾಣಾ

ವ್ಯಾಪ್ತಿಗೆ ಸಂಬಂಧಪಟ್ಟಿರುವುದರಿಂದ, ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೀಡುವುದು ಆಪಾದಿತ ಸರ್ಕಾರಿ ನೌಕರರ ಕಾರ್ಯವ್ಯಾಪ್ತಿಗೆ ಒಳಪಟ್ಟಿದೆ. ಆದರೆ, ಆಪಾದಿತ ಸರ್ಕಾರಿ ನೌಕರರು ಸ್ಥಳಕ್ಕೆ ಭೇಟಿ ನೀಡಿದ ಸಂಧರ್ಭದಲ್ಲಿ ಸ್ವತ್ತಿನ ಬಾಜುದಾರರು ತಂಟೆ ತಕರಾರು ಮಾಡಿರುವುದಾಗಿ ಹೇಳಿದ್ದಾರೆ. ಆದರೆ, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಸರ್ವೆ ಸ್ಕೆಚ್ ನೀಡುವ ಅಧಿಕಾರ ಆಪಾದಿತ ಸರ್ಕಾರಿ ನೌಕರರಿಗೆ ಇದ್ದರೂ ಸಹ ಅನಾವಶ್ಯಕವಾಗಿ ದೂರುದಾರರಿಗೆ ತೊಂದರೆ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಪಾದಿತ ಸರ್ಕಾರಿ ನೌಕರರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಆಪಾದಿತ ಸರ್ಕಾರಿ ನೌಕರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಅದಲ್ಲದೆ, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮ 3(1)ರನ್ವಯ ದುರ್ನಡತೆ/ದುರ್ವರ್ತನೆ ಕಂಡು ಬಂದಿದ್ದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ ಹಾಗೂ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ

ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, **ನಿಮ್ಮ ವಿರುದ್ಧ ಈ ಮೇಲ್ಕಂಡ ಆಪಾದನೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 14/12/2020 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ-11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 15/02/2021 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ **ಶ್ರೀ ಗೌತಮ್** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.-1 ರಿಂದ 17** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 04/10/2021 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆಪಾದಿತ ಸರ್ಕಾರಿ ನೌಕರ ಶ್ರೀ **ಮಧು** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.–1** ಎಂದು ವಿಚಾರಣೆ ಮಾಡಿಕೊಂಡು ನಿ.ಡಿ–1 ರಿಂದ 6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ನಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**<u>ಕಾರಣಗಳು:</u>**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ **ಗೌತಮ್** ರವರನ್ನು

ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 17** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. **ದೂರುದಾರ ಶ್ರೀ ಗೌತಮ್ ಪಿ.ಡಬ್ಲ್ಯೂ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ** ತಿರುಮಲ್ಲಯ್ಯರವರು ತನ್ನ ತಾತನಾಗಿದ್ದು ಅವರು ಈಗ ಮರಣ ಹೊಂದಿರುತ್ತಾರೆಂದು, ಗ್ರಾಮಠಾಣ ಆಸ್ತಿ ಸಂ.9, ಲಕ್ಕೇನಹಳ್ಳಿ ಗ್ರಾಮ, ತುಮಕೂರು ಜಿಲ್ಲೆಯ ಆಸ್ತಿಯು ಸ್ವಯಾರ್ಜಿತ ಆಸ್ತಿ ಆಗಿದ್ದು, 2015ರ ಸಾಲಿನಲ್ಲಿ ಸದರಿ ಆಸ್ತಿಗೆ ಖಾತೆ ಮಾಡಲು ಅರ್ಜಿ ಕೊಟ್ಟಿದ್ದಾಗಿ, ಸರ್ವೆಯರ್ ರವರು ಸ್ಥಳಕ್ಕೆ ಭೇಟಿ ಕೊಟ್ಟು ಪಿಡಿಓ ರವರನ್ನು ಸ್ಥಳಕ್ಕೆ ಕರೆ ಮಾಡಿ ಕರೆದಿದ್ದು, ಪಿಡಿಓರವರು ಸ್ಥಳಕ್ಕೆ ಬಂದಿರುವುದಿಲ್ಲ. ಆ ಸಮಯದಲ್ಲಿ ಡಿಜಿಓರವರೇ ಪಿಡಿಓ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. 2–3 ಬಾರಿ ಡಿಜಿಓರವರಿಗೆ ಸ್ಥಳ ಪರಿಶೀಲನೆ ಮಾಡುವಂತೆ ಅರ್ಜಿ ಕೊಟ್ಟರೂ ಸಹ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಇಲ್ಲಿಯವರೆಗೂ ಡಿಜಿಓ ರವರು ಖಾತೆ ಮಾಡಿಕೊಟ್ಟಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

15. ದೂರುದಾರ ಶ್ರೀ ಗೌತಮ್ ಪಿ.ಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2016ರಲ್ಲಿ ತಾನು ಈ ಬಗ್ಗೆ ಮಾನ್ಯ ಲೋಕಾಯುಕ್ತ ಕಛೇರಿಯಲ್ಲಿ ದೂರು ನೀಡಿದ್ದು, ದೂರಿನೊಂದಿಗೆ ಫಾರಂ ನಂ. 1 ಮತ್ತು 2 ನ್ನು ನೀಡಿದ್ದು ಅದು **ನಿ.ಪಿ–1** ರಿಂದ **3** ಎಂದು, ದೂರಿನೊಂದಿಗೆ ತಾನು ಆಸ್ತಿ ದಾಖಲೆಯ ನಕಲು ಪತ್ರವನ್ನು ನೀಡಿದ್ದು, ಅದನ್ನು ***ನಿಪಿ–4*** ಎಂದು, ಸದರಿ ಆಸ್ತಿಯ ಗ್ರಾಮಠಾಣ ನಕಾಶೆ ನಕಲನ್ನು ಹಾಜರುಪಡಿಸಿದ್ದು ಅದನ್ನು ***ನಿಪಿ–5*** ಎಂದು, ಆಸ್ತಿ ಸರ್ವೆಗೆ ಸಂಬಂಧಪಟ್ಟಂತೆ ಹಣ ಸಂದಾಯ ಮಾಡಿದ ರಸೀದಿಯ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ***ನಿಪಿ–6*** ಎಂದು, ಋಣಭಾರ ದಾಖಲೆ ಹಾಜರು ಪಡಿಸಿದ್ದು ಅದನ್ನು ***ನಿಪಿ–7*** ಮತ್ತು ***ನಿಪಿ–8*** ಎಂದು, ಪಿಡಿಓ ರವರು ಸರ್ವೆ ಸಂಬಂಧ ಹಣ ಪಾವತಿ ಮಾಡಲು ನೀಡಿದ ಹಿಂಬರಹವನ್ನು ***ನಿಪಿ–9*** ಎಂದು, ತನ್ನ ತಾತನವರು ನೀಡಿದ ಅರ್ಜಿ

ಪ್ರತಿಯನ್ನು ***ನಿಪಿ–10*** ಎಂದು, ತನ್ನ ಆಸ್ತಿಯು ಗ್ರಾಮಠಾಣದ ಜಮೀನು ಎಂದು ತೋರಿಸಲು ಪಕ್ಕದ ಜಮೀನಿನ ಕ್ರಯಪತ್ರದ ನಕಲನ್ನು ಹಾಜರುಪಡಿಸಿದ್ದು, ಅದನ್ನು ***ನಿಪಿ–11*** ಎಂದು ಗುರುತಿಸಲಾಗಿರುತ್ತದೆ.

16. ದೂರುದಾರ ಶ್ರೀ ಗೌತಮ್ ಪಿ.ಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಮ್ಮ ಆಸ್ತಿಯನ್ನು ಸರ್ವೇ ಮಾಡಲು ವಿಳಂಬ ಆದ ಬಗ್ಗೆ ಮಾಹಿತಿ ಪಡೆಯಲು ಮಾಹಿತಿ ಹಕ್ಕು ಆಯೋಗದಲ್ಲಿ 03 ಅರ್ಜಿಯನ್ನು ತನ್ನ ತಾತನವರು ನೀಡಿದ್ದು, ಅದನ್ನು ***ನಿಪಿ–12, ನಿಪಿ–13*** ಮತ್ತು ***ನಿಪಿ–14*** ಎಂದು, ಅದಕ್ಕೆ ಸಾರ್ವಜನಿಕ ಮಾಹಿತಿ ಅಧಿಕಾರಿ ನೀಡಿದ ಉತ್ತರವನ್ನು ***ನಿಪಿ–15*** ಎಂದು, ಹಲವಾರು ಬಾರಿ ಅರ್ಜಿ ಕೊಟ್ಟರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಬಂದು ಸ್ಥಳವನ್ನು ಅಳತೆ ಮಾಡಿರುವುದಿಲ್ಲ. ತಾತ ಕ್ರಯ ಪತ್ರದ ನಕಲನ್ನು ಹಾಜರುಪಡಿಸಿದ್ದು, ಅದನ್ನು ***ನಿಪಿ–16*** ಎಂದು, ತಮ್ಮ ಆಸ್ತಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿ ಕಾರ್ಯದರ್ಶಿರವರು ನೀಡಿದ ದಾಖಲೆಯನ್ನು ಹಾಜರುಪಡಿಸಿದ್ದು, ಅದನ್ನು ***ನಿಪಿ–17*** ಎಂದು ಗುರುತಿಸಲಾಯಿತು. ಇಲ್ಲಿಯವರೆಗೂ ಸಹ ಡಿಜಿಓರವರು ತಮ್ಮ ಆಸ್ತಿಗೆ ಸಂಬಂಧಪಟ್ಟಂತೆ ಖಾತೆ ಮಾಡದೆ ಕರ್ತವ್ಯ ಲೋಪ ಎಸಗಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

17. ದೂರುದಾರರನ್ನು ಆಪಾದಿತ ಸರ್ಕಾರಿ ನೌಕರರ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಈ ಕೆಳಕಂಡಂತೆ ನುಡಿದಿರುತ್ತಾರೆ:–

> "ಲೋಕಾಯುಕ್ತ ಸಂಸ್ಥೆಗೆ ದೂರನ್ನು ನಾನು ಮತ್ತು ನಮ್ಮ ತಾತ ನೀಡಿರುತ್ತೇವೆ. ನಿಪಿ–1ರಲ್ಲಿ ನಮ್ಮ ತಾತನ ಹೆಸರು ಇರುತ್ತದೆ ಎಂದರೆ ಸರಿ. ಆದರೆ ಅದಕ್ಕೆ ನನ್ನ ತಾತ ಸಹಿ ಮಾಡಿಲ್ಲ ನಾನು ಮಾಡಿರುತ್ತೇನೆ. ನಿಪಿ–3ರಲ್ಲಿ ದೂರನ್ನು ನೀಡಿರುವುದು ನನ್ನ ತಾತ ಆದರೆ ನಾನು ನಮ್ಮ ತಾತನ ಪರವಾಗಿ ಸಹಿ ಮಾಡಿರುತ್ತೇನೆ. ದೂರಿನಲ್ಲಿ ಹೇಳಿರುವ ಅಂಶ ನಮ್ಮ ತಾತ ಹೇಳಿ ಬರೆಸಿರುವುದು

ಎಂದರೆ ಸರಿ. ನಿಪಿ–16ರ ಕ್ರಯಪತ್ರ 1948ರಲ್ಲಿ ಆಗಿರುತ್ತದೆ. ಸದರಿ ಜಮೀನಿನ ಖಾತೆ ನಮ್ಮ ತಾತನ ಹೆಸರಿನಂತೆ ಆಗಿರುವುದಿಲ್ಲ. ನಿಪಿ–1ರಲ್ಲಿ ಖಾತೆ ಬಗ್ಗೆ ಇಲ್ಲ. ಸರ್ವೇ ಸ್ಕೆಚ್ ಬಗ್ಗೆ ಇರುತ್ತದೆ ಎಂದರೆ ಸರಿ. ಸ್ಕೆಚ್ ಆದ ನಂತರ ಸರ್ವೆ ಆಗುತ್ತದೆ ಎಂದರೆ ಸರಿ. ದೂರು ಕೊಡುವವರೆಗೂ ಇಲ್ಲಿಯವರೆಗೂ ಖಾತೆ ನಮ್ಮ ಹೆಸರಿಗೆ ಆಗಿರುವುದಿಲ್ಲ. ನಿಪಿ–4 ರಲ್ಲಿ ಆಸ್ತಿಯ ಖಾತೆಯ ನಂ.9 ಎಂದು ಬರೆದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಖಾತೆ ನಂ.9 ಮೂಲ ಕ್ರಯದಾರರ ಹೆಸರಿಗೆ ಆಗಿತ್ತು. ನಿಪಿ–4ರಲ್ಲಿ ಸ್ವತ್ತಿನ ಸಂಖ್ಯೆಯನ್ನು ಯಾರು ಕೊಟ್ಟಿರುತ್ತಾರೆ, ಯಾರು ಬರೆದಿರುತ್ತಾರೆ ಎಂದರೆ ನಾಡ ಕಛೇರಿಯಲ್ಲಿ ಪಡೆದು ಬರೆದಿರುತ್ತೇವೆ. ಸದರಿ ನಂಬರನ್ನು ನಾಡಕಛೇರಿಯವರು ನೀಡಿರುತ್ತಾರೆ. ವಿಲ್ ಪತ್ರ ಯಾವಾಗ ನೊಂದಣಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಪತ್ರ ಯಾವ ಸಾಲಿನಲ್ಲಿ ಆಗಿತ್ತು ಎಂದರೆ 2015–16ನೇ ಸಾಲಿನಲ್ಲಿ ಆಗಿರುತ್ತದೆ. ನಮ್ಮ ತಾತನ 2018ರಲ್ಲಿ ಮರಣ ಹೊಂದಿರುತ್ತಾರೆ. ಬೋಗಸ್ ವಿಲ್‌ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ–5 ನಕಾಶೆಯನ್ನು ಸರ್ವೇ ಕಛೇರಿ, ತುಮಕೂರಲ್ಲಿ ತೆಗೆದುಕೊಂಡಿರುತ್ತೇನೆ. ನಿಪಿ–5ರಲ್ಲಿ ಸಹಿ ಇಲ್ಲ ಎಂದರೆ ಸರಿ. ನಿಪಿ–5ನ್ನು ಪಡೆಯಲು ಸ್ವೀಕೃತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿ".

"ನಾವು ಕೊಟ್ಟ ಅರ್ಜಿಯನ್ನು ಡಿಜಿಓರವರು ತಹಶೀಲ್ದಾರರವರಿಗೆ ಆಸ್ತಿಗೆ ಸ್ಕೆಚ್ ಮಾಡಲು ಕಳುಹಿಸಿ ಕೊಟ್ಟಿರುತ್ತಾರೆ ಎಂದರೆ ಸರಿ. ತಹಶೀಲ್ದಾರ್, ತುಮಕೂರುರವರು ಸರ್ವೆಯರ್‌ಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಸ್ಥಳಕ್ಕೆ ಹೋದಾಗ ಆ ಜಾಗದಲ್ಲಿ ಸ್ಥಳವನ್ನು ಗುರುತು ಮಾಡಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆಯರ್ ರವರು ತಮ್ಮ ವರದಿಯಲ್ಲಿ ಈ ಸ್ಥಳವನ್ನು ಗುರುತಿಸಲು ಆಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ ಎಂದರೆ ಸರಿ. ಸರ್ವೆಯರ್ ಕೊಟ್ಟ ವರದಿಯನ್ನು ತೋರಿಸಲಾಗಿ ಸದರಿ ವರದಿಯನ್ನು *ನಿಡಿ–1*

ಎಂದು ಗುರುತಿಲಾಯಿತು. ಸರ್ವೆಯರ್ ರವರು ದಿ:03-04-2015ಕೊಟ್ಟ ನೋಟೀಸನ್ನು ಸಾಕ್ಷಿದಾರರಿಗೆ ತೋರಿಸಿದ್ದು, ಅದನ್ನು *ನಿಡಿ-2* ಎಂದು ಗುರುತಿಸಲಾಯಿತು".

" ದಿ:06-08-2018ರಂದು ಆಸ್ತಿಯ ಖಾತೆ ಮಾಡಲು ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನನ್ನ ಸಲ್ಲಿಸಿದ ಅರ್ಜಿಯನ್ನು ವಕೀಲರ ಅಭಿಪ್ರಾಯಕ್ಕೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ವಕೀಲರು ಕೊಟ್ಟ ಅಭಿಪ್ರಾಯವನ್ನು ತೋರಿಸಿದ್ದು, ಅದನ್ನು *ನಿಡಿ-3* ಎಂದು ಗುರುತಿಸಲಾಯಿತು. ಡಿಜಿಓರವರ ನಂತರ ಬಂದ ಪಿಡಿಓರವರು ಹಿಂಬರಹವನ್ನು ಕೊಟ್ಟಿರುತ್ತಾರೆ ಎಂದರೆ ಸರಿ ಅದನ್ನು *ನಿಡಿ-4* ಎಂದು ಗುರುತಿಸಲಾಯಿತು. ದಿ:17-10-2018ರಂದು ಗ್ರಾಮ ಪಂಚಾಯಿತಿ ಸಭೆಯಲ್ಲಿ ಖಾತೆ ಮಾಡಲು ಬರುವುದಿಲ್ಲ ಎಂದು ತೀರ್ಮಾನ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗ್ರಾಮ ಪಂಚಾಯತಿ ಠಾರವಿನ ಬಗ್ಗೆ ತಾಲ್ಲೂಕು ಕಾರ್ಯ ನಿರ್ವಾಹಕ ಅಧಿಕಾರಿ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಾಲ್ಲೂಕು ಪಂಚಾಯತಿ ತುಮಕೂರುರವರು ಜಿಲ್ಲಾ ಪಂಚಯತಿಯವರಿಗೆ ಕಳುಹಿಸಿ ಅದರ ಪ್ರತಿಯನ್ನು ನನಗೆ ಕಳುಹಿಸಿದ್ದರು ಎಂದರೆ ನನಗೆ ಕಳುಹಿಸಿರುವುದಿಲ್ಲ".

18. ಆಪಾದಿತ ಸರ್ಕಾರಿ ನೌಕರ ಶ್ರೀ **ಮಧು** ತಮ್ಮ ಪರವಾಗಿ ತಾವೇ **ಡಿ.ಡಬ್ಲ್ಯೂ.-1** ಎಂದು ಸಾಕ್ಷ್ಯ ನುಡಿದಿದ್ದು ನಿ.ಡಿ-1 ರಿಂದ ನಿ.ಡಿ-4 ಮತ್ತು 1ಎ ಯಿಂದ 4ಎ ಹಾಗೂ ನಿ.ಡಿ-5 ಮತ್ತು ನಿ.ಡಿ-6 ರವರೆಗಿನ ದಾಖಲಾತಿಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. **ಸರ್ವೆಯವರು ಕೊಟ್ಟ ವರದಿ ನಿ.ಡಿ-1,** ದಿನಾಂಕ 29/06/2013 ರ ಸರ್ಕಾರದ ಸುತ್ತೋಲೆಯ ಪ್ರತಿ **ನಿ.ಡಿ-1ಎ,** ದಿನಾಂಕ 03.04.2015 ರಂದು ಸವೆಯರ್ ರವರು ಕೊಟ್ಟ ನೋಟಿಸ್ **ನಿ.ಡಿ-2,** ದಿನಾಂಕ 25.08.2014 ರ ಸರ್ಕಾರದ ಸುತ್ತೋಲೆಯ ಪ್ರತಿ **ನಿ.ಡಿ-2ಎ,** ವಕೀಲರು ಕೊಟ್ಟ ಅಭಿಪ್ರಾಯ **ನಿ.ಡಿ-3,** ದಿನಾಂಕ

17/10/2018 ರಂದು ನಡೆದ ಗ್ರಾಮ ಪಂಚಯಿತಿ ಸಾಮಾನ್ಯ ಸಭೆಯ ನಡವಳಿಯ ಪ್ರತಿ **ಡಿ–3ಎ,** ಡಿಜಿಓ ರವರ ನಂತರ ಬಂದ ಪಿಡಿಓ ರವರು ನೀಡಿರುವ ಹಿಂಬರಹ ನಿ.ಡಿ–4, ದಿನಾಂಕ 10.08.2020 ರಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಕಾರ್ಯನಿವಾಹಕ ಅಧಿಕಾರಿಗಳಿಗೆ ಕಳುಹಿಸಿದ ಪತ್ರದ ಪ್ರತಿ **ನಿ.ಡಿ–4ಎ,** ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ 10.08.2021 ರಂದು ಉಪಕಾರ್ಯದರ್ಶಿ ಅಭಿವೃದ್ಧಿ, ಜಿಲ್ಲಾ ಪಂಚಯತ್ ತುಮಕೂರು ರವರಿಗೆ ಕಳುಹಿಸಿಕೊಟ್ಟಿರುವ ಪತ್ರದ ಪ್ರತಿ **ನಿ.ಡಿ–5,** ದಿನಾಂಕ 26.10.2018 ರಂದು ದೂರುದಾರರಿಗೆ ಗ್ರಾಮ ಪಂಚಾಯತಿಯಿಂದ ನೀಡಿದ ಪತ್ರದ ನಕಲಿನ ಪ್ರತಿ **ನಿ.ಡಿ.6** ಆಗಿರುತ್ತದೆ. ಅರ್ಜಿದಾರರು ದಿನಾಂಕ 14/02/2013ರಂದು ಸಲ್ಲಿಸಿರುವ ಅರ್ಜಿಯ ಜೊತೆ ಯಾವುದೇ ನ್ಯಾಯಾಲಯದ ಆದೇಶವನ್ನು ಸಲ್ಲಿಸಿರುವುದಿಲ್ಲ ಹಾಗೂ ಖುದ್ದು ಗ್ರಾಮಕ್ಕೆ ಬಂದು ಜನರಿಗೆ ತಿಳುವಳಿಕೆ ನೀಡಿ ಅನುಕೂಲ ಮಾಡಿಕೊಡಬೇಕೆಂದು ಕೋರಿದ್ದು, ಆಗ ಹಿರಿಯೂರು ಪುರಸಭೆ ಉಪ ಚುನಾವಣೆ ನಡೆಯುತ್ತಿದ್ದು, ನಂತರ ತನ್ನನ್ನು ಕೂಡಲೇ ಬೇರೆ ಕಡೆಗೆ ವರ್ಗಾವಣೆ ಮಾಡಿ ಬಿಡುಗಡೆ ಮಾಡಿದ್ದಾಗಿ, ಖಾಸಗಿ ವ್ಯಕ್ತಿಗಳ ಆಸ್ತಿಯ ರಕ್ಷಣೆ ಸಂಬಂಧ ಸಿವಿಲ್ ಸ್ವರೂಪದಾಗಿರುತ್ತದೆಂದು ಆದ್ದರಿಂದ, ತಮ್ಮ ಮೇಲಿನ ಆರೋಪಗಳನ್ನು ಅಲ್ಲಗಳೆದಿರುತ್ತಾರೆ.

19. ದೂರುದಾರರ ದೂರು, ಪಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಪಿ–1 ರಿಂದ 17 ರ ದಾಖಲಾತಿಗಳು ಹಾಗೂ ಡಿ.ಡಬ್ಲ್ಯೂ–1 ರವರ ಸಾಕ್ಷ್ಯ ನಿ.ಡಿ–1 ಎ ರಿಂದ 4ಎ ರವರೆಗೆ ಹಾಗೂ ನಿ.ಡಿ–5 ಮತ್ತು 6 ರವರೆಗಿನ ದಾಖಲಾತಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಿರುತ್ತೇನೆ. ದೂರುದಾರರಾದ ಶ್ರೀ ತಿರುಮಲಯ್ಯ ರವರ ಪರ ಅವರ ಮೊಮ್ಮಗ ಶ್ರೀಗೌತಮ್ ಎಂ. ರವರು ದಿನಾಂಕ 08/12/2015 ರಂದು **ನಿ.ಪಿ–1 ರಿಂದ 3** ರಂತೆ ಆಪಾದಿತ ಸರ್ಕಾರಿ ನೌಕರ ಶ್ರೀ ಮಧು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಲಕ್ಕೇನಹಳ್ಳಿ ಗ್ರಾಮ ಪಂಚಾಯತ್, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ರವರ ವಿರುದ್ಧ ದೂರು ಸಲ್ಲಿಸಿರುತ್ತಾರೆ. ತುಮಕೂರು ತಾಲ್ಲೂಕು, ಹೆಬ್ಬೂರು ಹೋಬಳಿ, ಲಕ್ಕೇನಹಳ್ಳಿ ಗ್ರಾಮದ ಸೈಟ್ ನಂ. 9 ರ ಸರ್ವೆ ಸ್ಕೆಚ್‌ಗಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿ

ಸಂಖ್ಯೆ 18061114110415 ಆಗಿದ್ದು, ಆಪಾದಿತ ಸರ್ಕಾರಿ ನೌಕರ ಮಧು ರವರು ನಮ್ಮ ಕೆಲಸವನ್ನು ಮಾಡಿಕೊಟ್ಟಿರುವುದಿಲ್ಲವೆಂದು ಆಪಾದಿಸಿ ಸಲ್ಲಿಸಿರುವ ದೂರಾಗಿರುತ್ತದೆ.

20. ಆಪಾದಿತ ಸರ್ಕಾರಿ ನೌಕರ ಶ್ರೀ ಮಧು ರವರು ತುಮಕೂರು ಜಿಲ್ಲೆ, ಲಕ್ಕೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ **16.06.2014** ರಿಂದ **23.01.2016** ರವರೆಗೆ ಕರ್ತವ್ಯ ನಿರ್ವಹಿಸಿರುವುದು ಕಂಡು ಬರುತ್ತದೆ. ದೂರುದಾರರಾದ ಶ್ರೀ ತಿರುಮಲಯ್ಯರವರ ಹೆಸರಿನಲ್ಲಿ ದಿನಾಂಕ 10.06.2015 ರಂದು ತುಮಕೂರು ಜಿಲ್ಲೆಯ ತುಮಕೂರು ಬ್ಲಾಕ್ ನಾಗವಲ್ಲಿ ಗ್ರಾಮ ಪಂಚಾಯತಿಯಲ್ಲಿ ದಾಖಲಾಗಿರುವ ಲಕ್ಕೇನಹಳ್ಳಿ ಗ್ರಾಮಠಾಣಾ ಆಸ್ತಿ ಸಂಖ್ಯೆ 152500903800720008 ರ ಬಾಬ್ತು ಅಳತೆ ಮಾಡಲು ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.

21. ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಅಪ 166 ಗ್ರಾಪಂಅ 2013 ದಿನಾಂಕ 29/06/2013 **ನಿ.ಡಿ–1** ರಂತೆ " ಗ್ರಾಮ ಪಂಚಾಯತಿಗಳು ನಾಗರೀಕನು ಗ್ರಾಮ ಠಾಣಾ ಆಸ್ತಿ ಎಂದು ಹೇಳಿ ಅದಕ್ಕೆ ಸಂಬಂದಿಸಿದಂತೆ ನಮೂನೆ–9 ಯನ್ನು ಕೋರಿದಾಗ ಸದರಿ ಸ್ವತ್ತು ಗ್ರಾಮ ಠಾಣಾ ಒಳಗೆ ಬರುತ್ತದೆಯೇ ಅಥವಾ ಇಲ್ಲವೆ ಎಂದು ದೃಢೀಕರಿಸಲು ಗ್ರಾಮ ಪಂಚಾಯತಿಗೆ ಯಾವುದೇ ಆಧಾರ ಇರುವುದಿಲ್ಲ. ಕರ್ನಾಟಕ ಭೂ ಕಂದಾಯ ಕಾಯಿದೆ, 1964 ರ ಪ್ರಕರಣ 62 ರಡಿಯಲ್ಲಿ ಗ್ರಾಮಲೆಕ್ಕಾಧಿಕಾರಿಗೆ ಇಲ್ಲಾ ಆಸ್ತಿ ಮತ್ತು ಭೂ ದಾಖಲೆಗಳನ್ನು ನಿರ್ವಹಣೆ ಮಾಡುವಧಿಕಾರ ನೀಡಲಾಗಿದೆ. ಆದುದರಿಂದ ಗ್ರಾಮ ಪಂಚಾಯತಿಯಲ್ಲಿ ಅಂತಹ ಅರ್ಜಿ ಸ್ವೀಕರಿಸಿದ ತಕ್ಷಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅನುಬಂಧ–1 ರಲ್ಲಿರುವಂತೆ ಅರ್ಜಿದಾರನಿಗೆ ಹಿಂಬರಹ ನೀಡಲು ಸೂಚಿಸಿದೆ. ಮುಂದುವರೆದು ಸದರಿಸ್ವತ್ತು ಗ್ರಾಮಠಾಣಾದೊಳಗೆ ಬರುತ್ತದೆ ಅಥವಾ ಇಲ್ಲವೇ, ಗ್ರಾಮಠಾಣಾದೊಳಗೆ ಬಂದಲ್ಲಿ ಅದನ್ನು ದೃಢೀಕರಿಸಿ, ಸ್ವತ್ತಿನ ನಕಾಶೆ, ಅಳತೆಮತ್ತು ಚೆಕ್ಕುಬಂದಿಯೊಂದಿಗೆ ನೀಡಲು ಸಂಬಂಧಪಟ್ಟ ತಹಶೀಲ್ದಾರ್‌ರವರನ್ನು ಕೋರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅನುಬಂಧ–2 ರಲ್ಲಿರುವ ನಮೂನೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ರವರಿಗೆ

ಕೋರಿಕೆ ಸಲ್ಲಿಸಬೇಕು. ಆದ್ದರಿಂದ, ದೂರುದಾರರ ಆಸ್ತಿಗೆ ಸಂಬಂಧಿಸಿದ ನಕಾಶೆ ನೀಡುವ ಅಧಿಕಾರ ಕಾರ್ಯವ್ಯಾಪ್ತಿ ಆಪಾದಿತ ಸರ್ಕಾರಿ ನೌಕರರಿಗೆ ಬರುವುದಿಲ್ಲ.

**22.** **ನಿ.ಡಿ–2** ಸರ್ಕಾರದ ಸುತ್ತೋಲೆ ಆರ್‌ಡಿ 430 ಎಲ್‌ಜೆಪಿ 2013 ದಿನಾಂಕ 24.08.2014 ರಂತೆ, ಗ್ರಾಮ ಪಂಚಾಯತಿಯ ದಾಖಲೆಗಳಲ್ಲಿ ದಾಖಲಾಗಿರುವ ಆಸ್ತಿಗಳ ಬಗ್ಗೆ ತೆರಿಗೆ ನಿರ್ಧರಣೆ ಪಟ್ಟಿಯನ್ನು ಕಾಲೋಚಿತಗೊಳಿಸಲು ಆಸ್ತಿಯ ಗ್ರಾಮಠಾಣದ ಒಳಗೆ ಅಥವಾ ಹೊರಗೆ ಬರುವ ಬಗ್ಗೆ ಭೂಮಾಪನ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿ ದಾಖಲೆಗಳನ್ನು ಪಡೆಯಬೇಕೆಂದು ಮಾರ್ಗಸೂಚಿಗಳನ್ನು ಸರ್ಕಾರ ಸ್ಪಷ್ಟವಾಗಿ ಹೊರಡಿಸಿದ್ದು, ಆದ್ದರಿಂದ ಸರ್ವೆ ಸ್ಕೆಚ್ ನೀಡುವ ಅಧಿಕಾರ ಆಪಾದಿತ ಸರ್ಕಾರಿ ನೌಕರರ ಕಾರ್ಯವ್ಯಾಪ್ತಿಗೆ ಬರುವುದಿಲ್ಲ, ಅದು ಕಂದಾಯ ಇಲಾಖೆಯ ಸರ್ವೆ ಶಾಖೆಗೆ ಸಂಬಂಧಿಸಿರುವುದು ಸ್ಪಷ್ಟವಾಗಿರುತ್ತದೆ.

**23.** **ನಿ.ಡಿ.–3(ಎ)** ರಂತೆ ವಕೀಲರು ಕಾನೂನು ಸಲಹೆ ನೀಡಿದ್ದು, ಸದರಿ ಕ್ರಯಪತ್ರದಲ್ಲಿ ವಿಸ್ತೀರ್ಣ ನಮೂದಾಗಿರುವುದಿಲ್ಲ ಮತ್ತು ಸ್ವತ್ತಿಗೆ ಚೆಕ್ಕುಬಂದಿ ಸಹ ಸರಿಯಾಗಿ ಇರುವುದಿಲ್ಲ, ದಿನಾಂಕ 22.06.2015 ರಂದು ತಿರುಮಲಯ್ಯ ಎಂಬುವರ ಮೊಮ್ಮಗ ಶ್ರೀ ಎಂ. ಗೌತಮ್ ರವರಿಗೆ ವಿಲ್ ಯಾ ಮರಣ ಶಾಸನ ಪತ್ರ ಬರೆದಿರುತ್ತಾರೆ. ಆದರೆ, ತಿರುಮಲಯ್ಯ ಕ್ರಯಕ್ಕೆ ಕೊಂಡಿರುವ ಸ್ವತ್ತಿಗೂ ಮತ್ತು ವಿಲ್ ಯಾ ಮರಣ ಶಾಸನ ಪತ್ರದಲ್ಲಿರುವ **ಸ್ವತ್ತಿಗೂ ವ್ಯತ್ಯಾಸ ಇರುತ್ತದೆ.** ನಿಶಾನೆ **ಡಿ–4(ಎ)** ನ್ನು ಪರಿಶೀಲಿಸಲಾಗಿ ಸದರಿ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ಸ್ಥಳವು ಖಾತೆ ಮಾಡಲು ಕೋರುತ್ತಿರುವ ಸ್ಥಳ ಇರುತ್ತದೆ ಅಂದರೆ ಸದರ ಸ್ಥಳವು ತಾವು ನೀಡಿರುವ ಮನೆ ಪಟ್ಟಿ ದಾಖಲೆಗಳಿಗೆ ತಾಳೆಯಾಗುತ್ತಿಲ್ಲವೆಂದು ಹಿಂಬರಹ ನೀಡಿರುವುದು ಕಂಡು ಬರುತ್ತದೆ.

24. **ನಿ.ಡಿ–3 ರಂತೆ** ಆಪಾದಿತ ಸರ್ಕಾರಿ ನೌಕರರ ನಂತರದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ವಿಷಯವನ್ನು ಪರಿಶೀಲಿಸಿ ದಿನಾಂಕ 17.10.2018 ರ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿದ್ದು, ಸದರಿ ಸಾಮಾನ್ಯ ಸಭೆಯಲ್ಲಿ ಅರ್ಜಿದಾರರಾದ ಶ್ರೀ ಗೌತಮ್

ಬಿನ್ ಮುನಿಸ್ವಾಮಪ್ಪ ರವರು ತುಮಕೂರು ತಾಲ್ಲೂಕು ಲಕ್ಕೇನಹಳ್ಳಿ ಗ್ರಾಮದ ತಮ್ಮ ತಾತನ ಸ್ವತ್ತು ಖಾನೇಷುಮಾರಿ ಸಂಖ್ಯೆ 09ನ್ನು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಕೊಡಲು ಮನವಿ ಸಲ್ಲಿಸಿದ್ದರ ಬಗ್ಗೆ ಚರ್ಚಿಸಿ " ಸದರಿ ಸ್ಥಳವು ಸರ್ಕಾರಿ ಓಣಿ ಎಂದು ಗುರುತಿಸಲ್ಪಟ್ಟಿದ್ದು ಅದರ ಪಕ್ಕದಲ್ಲಿ ಮಳೆ ನೀರು ಹರಿಯುವ ಹಳ್ಳ ಹಾಗೂ ಸರ್ವೆ ನಂಬರ್ ಜಮೀನುಗಳು ಇದ್ದು, ಶ್ರೀ ಗೌತಮ್ ರವರು ನೀಡಿರುವ ವಿಲ್‌ನಲ್ಲಿ ನಮೂದಾಗಿರುವ ಆಸ್ಥಿ ಸಂಖ್ಯೆಯು ಗ್ರಾಮಪಂಚಾಯಿತಿ ದಾಖಲಾತಿಯಲ್ಲಿ ಕಂಡುಬಂದಿರುವುದಿಲ್ಲ. 1948 ರ ಕರಾರು ಪತ್ರದಲ್ಲಿ ಸದರಿ ಸ್ಥಳದ ಚೆಕ್ಕುಬಂದಿ ಮತ್ತಿ ವಿಸ್ತೀರ್ಣ ನಮೂದಾಗಿರುವುದಿಲ್ಲ. ಆದ್ದರಿಂದ ಸದರಿ ನಿವೇಶನದ ಖಾತೆ ಮಾಡಲು ಪೂರಕ ದಾಖಲೆ ಒದಗಿಸದೇ ಇರುವುದರಿಂದ **ಖಾತೆ ಮಾಡಲು ಆಸಾಧ್ಯವಾಗಿರುತ್ತದೆಂದು ಸರ್ವಾನುಮತದಿಂದ ತೀರ್ಮಾನಿಸಿರುವುದು ಕಂಡು ಬರುತ್ತದೆ.**

**25.** **ನಿ.ಡಿ–2(ಎ)** ರಲ್ಲಿ ಭೂ ಮಾಪಕರಾದ ಶ್ರೀ ಚಂದ್ರೇಗೌಡ ರವರು ದಿನಾಂಕ 04.09.2015 ರಂದು ಸ್ವತ್ತಿನ ಅಳತೆಯನ್ನು ನಿರ್ವಹಿಸುವುದಾಗಿಯೂ ಆ ದಿನ ದೂರುದಾರರು ಮತ್ತು ಇತರರು ಜಮೀನಿನಲ್ಲಿ ಹಾಜರಿದ್ದು, ಹಕ್ಕಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಗೂ ಚೆಕ್ಕುಬಂದಿ ಇತರೆ ವಿಷಯಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರ್‌ಪಡಿಸಲು ಸೂಚಿಸಿದ್ದು, ದೂರುದಾರರು ದಿನಾಂಕ 04.09.2015 ರಂದು ಸ್ಥಳದಲ್ಲಿ ಹಾಜರಿದ್ದು, ಮಹಜರ್‌ಗೆ ಸಹಿ ಮಾಡಿರುವುದು ಕಂಡುಬರುತ್ತದೆ.

26. ಪ್ರಾ.ಸಾ–1 ದೂರುದಾರರು ತಮ್ಮ ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. " ನಾವು ಕೊಟ್ಟ ಅರ್ಜಿಯನ್ನು ಡಿಜಿಓ ರವರು ತಹಶೀಲ್ದಾರ್ ರವರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ. ತಹಶೀಲ್ದಾರ್, ತುಮಕೂರು ರವರು ಸರ್ವೆಯರ್‌ಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿ. ಸರ್ವೆಯರ್ ರವರು ತಮ್ಮ ವರದಿಯಲ್ಲಿ ಈ ಸ್ಥಳವನ್ನು ಗುರುತಿಸಲು ಆಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ ಎಂದರೆ ಸರಿ". ಮೇಲ್ಕಂಡ ಸಂದರ್ಭಗಳಲ್ಲಿ ಆಪಾದಿತ ಸರ್ಕಾರಿ ನೌಕರರು ಮತ್ತು ನಂತರದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾನೂನು ರೀತ್ಯಾ ಎಲ್ಲಾ ಸೂಕ್ತ ಕ್ರಮಗಳನ್ನು

ಕೈಗೊಂಡಿದ್ದು, ದೂರುದಾರರು ಸರಿಯಾದ ದಾಖಲಾತಿಗಳನ್ನು ಸಲ್ಲಿಸದೆ ಹಾಗೂ ಸರ್ವೆ ಕೆಲಸ ಕಂದಾಯ ಇಲಾಖೆಯ ಸರ್ವೆ ವಿಭಾಗಕ್ಕೆ ಬರುವುದರಿಂದ ಆಪಾದಿತ ಸರ್ಕಾರಿ ನೌಕರರ ವಿರುದ್ಧ ದೋಷಾರೋಪಣೆಯಲ್ಲಿ ಮಾಡಿರುವ ಆಪಾದನೆಯನ್ನು **ಶಿಸ್ತುಪ್ರಾಧಿಕಾರಿಗಳು ಸಾಭೀತುಪಡಿಸುವಲ್ಲಿ ವಿಫಲವಾಗಿರುತ್ತದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.**

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀ ಮಧು,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಲಕ್ಕೇನಹಳ್ಳಿ ಗ್ರಾಮ ಪಂಚಾಯತಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ ರವರ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆ ಗಳನ್ನು **ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**10ನೇ ಜನವರಿ 2022.**

10/1/…

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Gowtham (complainant) (original) | |
| **LIST OF WITNESS EXAMINED ON BEHALF OF DEFENSE :** | |
| DW-1 : Sri. Madhu (DGO)-(original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1: | Complaint of complainant dated 08/12/2015 (original) |
| Ex.P.2 : | Form No. I (complaint) dt. 08/12/2015 (original) |
| Ex.P.3 : | Form No. II (Affidavit) dt. 08/12/2015 (original) |
| Ex.P.4 : | Will dated 22/06/2015 (Xerox) |
| Ex.P.5 : | Copy of the Gramatana sketch (Xerox) |
| Ex.P.6 : | Receipt dated 10/06/2015 (Xerox) |
| Ex.P.7 & 8 | Encumbrance Form No. 15 & 16 (Xerox) |
| Ex.P.9 : | Endorsement issued by PDO to Sri. Thirumalaiah (Xerox) |
| Ex.P.10 : | Application of Sri. Thirumalaiah 30/01/2015 (Xerox) |
| Ex.P.11 : | Copy of the sale deed of neighbor land (Xerox) |
| Ex.P.12 to 14 : | RTI application of Sri. Thirumalaiah ( Original 119, 121, 123 xerox 120, 122 & 124) |

| | |
|---|---|
| Ex.P.15 : | Reply given by Public Information Officer dated 28/10/2015 (xerox) |
| Ex.P.16 : | Copy of the sale deed (xerox) |
| Ex.P.17 : | Copy of the information furnished by Panchayath Secretary pertains to property (Xerox) |
| **LIST OF EXHIBITS MARKED ON BEHALF OF DEFENSE:** | |
| Ex. D-1 | Report of Surveyor (Xerox) |
| Ex.D-1(a) : | Circular dated 29/06/2013 of Deputy Secretary, Rural Development and Panchayath Raj Department along with Annexure-I (xerox |
| Ex. D-2 | Certified Copy of notice of Surveyor dated 03/04/20-15 (Certified Xerox copy) |
| Ex.D-2(a) | Government Circulardated25.08.2014 (Xerox) |
| Ex.D-3 | Legal Opinion of Advocate Sri. Sannamarappa (Xerox) |
| EX. D-3(a) | Proceedings of Grama Panchayath dated 17/10/2018 (Xerox) |
| Ex. D-4 | Endorsement dated 25/09/2018 by PDO issued to Sri.Gowtham.M. (Xerox) |
| Ex. D-4(a) | Letter of PDO dated 08/07/2020 addressed to Executive Officer, Taluk Panchayath, Tumkur (Xerox) |
| Ex. D-5 | Letter of Executive Officer, Taluk Panchayath, Tumkur dated 10/08/2020 addressed to Deputy Secretary (Development) Z.P., Tumkur |

| | |
|---|---|
| Ex. D-6 | Letter of PDO dated 26/10/2018 addressed to Sri. Gowtham. (Xerox) |

**10$^{TH}$ January 2022.**

**( G.NANJUNDAIAH )**
Additional Registrar (Enquiries)-10
Karnataka Lokayukta,
Bengaluru.

**DOR of DGO No.: 31.07.2044**

KARNATAKA LOKAYUKTA

No.UPLOK-2/DE.712/2017/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 14.01.2022.

RECOMMENDATION

Sub:- Departmental inquiry against Shri Madhu, Panchayath Development Officer, Lakkenalli Grama Panchayath, Tumkur Taluk and District - reg.

Ref:- Government Order No. RDP 278 GPS 2017 dated 22.04.2017.

2) Nomination order No. UPLOK-2/DE.712/2017 dated 27.05.2017 of Upalokayukta, State of Karnataka.

3) Inquiry report dated 10.01.2022 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 22.04.2017 initiated the disciplinary proceedings against Shri Madhu, Panchayath Development Officer, Lakkenalli Grama Panchayath, Tumkur Taluk and District, [hereinafter referred to as Delinquent Government Official, for short as 'DGO'] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE.712/2017 dated 27.05.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of not issuing survey sketch in respect of site No.9 of Lakkenahally of Tumkur Taluk which was standing in the name of father of complainant and thereby committed misconduct.

4. The Inquiry Officer (Additional Registrar of Enquiries-10) on proper appreciation of oral and documentary evidence has held that, the charge against the DGO Shri Madhu, Panchayath Development Officer, Lakkenalli Grama Panchayath, Tumkur Taluk and District, is 'not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Enquiry Officer and exonerate DGO Shri Madhu, Panchayath Development Officer, Lakkenalli Grama Panchayath, Tumkur Taluk and District, of the charges levelled against him.

6. Action taken in the matter shall be intimated to this Authority.

Connected records are enclosed herewith.

14/1/22

**(JUSTICE B.S.PATIL)**
Upalokayukta,
State of Karnataka.